ಆ) ಮೇಲೆ ತಿಳಿಸಿದ ವಿದ್ಯುತ್ ಪ್ರಮಾಣದಲ್ಲಿ ಶೇಕಡಾ 51.8ರಷ್ಟು ವಿದ್ಯುತ್ ಪ್ರಮಾಣವು ಕೃಷಿ ವಲಯಕ್ಕೆ (ನೀರಾವರಿ ಪಂಪುಸೆಟ್ಟು ಬಳಕೆದಾರರಿಗೆ) ಸರಬರಾಜಾಗುತ್ತಿದೆ. ವಿದ್ಯುತ್ ಸರಬರಾಜನ್ನು ರಾಜ್ಯದ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ದಿನವಹಿ 10 ಘಂಟೆಗಳ ಕಾಲ 3 ಫೇಸ್‌ನಲ್ಲಿಯೂ, ಹಾಗೂ 8 ಗಂಟೆಗಳ ಕಾಲ ಸಿಂಗಲ್ ಫೇಸ್‌ನಲ್ಲಿಯೂ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ಬಾಕಿ ಉಳಿದ 6 ಘಂಟೆಗಳ ಕಾಲದಲ್ಲಿ ನಿಯಮಿತ ಲೋಡ್ ಶೆಡ್ಡಿಂಗ್‌ನ್ನು ನಿರ್ವಹಿಸ ಲಾಗುತ್ತಿದೆ. ಕೊರಟಗೆರೆ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿಯೂ ಸಹ ಇದು ಜಾರಿಯಲ್ಲಿರುತ್ತದೆ. ಅಲ್ಲದೇ, ವಿದ್ಯುತ್ ಬೇಡಿಕೆಯನ್ನು ನಿಯಂತ್ರಿಸಲು ಪ್ರತಿದಿನ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ವೇಳೆಗಳಲ್ಲಿ ಅನಿಯಮಿತ ಲೋಡ್ ಶೆಡ್ಡಿಂಗ್‌ನ್ನು ಸಹ ನಿರ್ವಹಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾಗಿದೆ.

ಅನಧಿಕೃತ ನೀರಾವರಿ ಪಂಪುಸೆಟ್‌ಗಳ ಸಕ್ರಮೀಕರಣ

661 (55) ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ 31-1-99ರವರೆಗೆ ಎಷ್ಟು ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು ಗುರುತಿಸಲಾಗಿದೆ.

ಆ) ಅನಧಿಕೃತ ಪಂಪ್‌ಸೆಟ್‌ಗಳಿ ಸಕ್ರಮೀಕರಣಕ್ಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಇ) ಇದುವರೆಗೆ ಸಕ್ರಮಗೊಳಿಸಲಾಗಿರುವ ಪಂಪ್‌ಸೆಟಗಳ ಸಂಖ್ಯೆ ಹಾಗೂ ಉಳಿದಿರುವ ಸಂಖ್ಯೆ ಎಷ್ಟು?

ಈ) ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲುನಿಗದಿ ಪಡಿಸುವ ಹಣವೆಷ್ಟು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ 31-1-99ರ ವರೆವಿಗೆ ಒಟ್ಟು 83,466ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು ಗುರುತಿಸಲಾಗಿದೆ.

ಆ) ಅನಧಿಕೃತ ನೀರಾವರಿ ಪಂಪುಸೆಟ್‌ಗಳನ್ನು ಸಕ್ರಮಗೊಳಿಸಲುದಿ :28-2-99ರವರೆವಿಗೆ ಗಡುವು ನೀಡಲಾಗಿತ್ತು. ಈ ಅವಧಿಯಲ್ಲಿ ನಿಗದಿತ ಹಣವನ್ನು ಮಂಡಳಿಗೆ ಪಾವತಿಸಿ ಅನಧಿಕೃತ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಿಕೊಳ್ಳಲು ಸೂಚಿಸಲಾಗಿತ್ತು. ಈ ಬಗ್ಗೆ ಹಸ್ತಪ್ರತಿ ಮತ್ತು ಪತ್ರಿಕಾ ಪ್ರಕಟಣೆಯ ಮೂಲಕ ಸಾಕಷ್ಟು ವ್ಯಾಪಕ ಪ್ರಚಾರವನ್ನು ಸಹ ಮಾಡಲಾಗಿತ್ತು.

ಇ) ದಿ: 31-1-99ರವರೆವಿಗೆ ಒಟ್ಟು 50,427 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ ಹಾಗೂ ಸಕ್ರಮೀಕರಣಕ್ಕಾಗಿ ಬಾಕಿ ಉಳಿದಿರುವ ಪಂಪ್‌ಸೆಟ್‌ಗಳ ಸಂ: 33039

ಈ) ದಿ: 28.2.99ರವೆರೆವಿಗೆ ಸಕ್ರಮಗೊಳಿಸಲು ಕಾಲಾವಕಾಶವನ್ನು ನೀಡಲಾಗಿತ್ತು ಹಾಗೂ ಕೆಳಗೆ ನಮೂದಿಸಿರುವ ಹಣವನ್ನುಸಕ್ರಮೀಕರಣಕ್ಕಾಗಿ ನಿಗದಿಪಡಿಸಲಾಗಿತ್ತು.

1) ಅನಧಿಕೃತ ನೀರಾವರಿ ಪಂಪ್‌ಸೆಟ್‌ಬಳಕೆದಾರರುಮಂಡಳಿ ಮಾದರಿಯಲ್ಲಿ ವಿದ್ಯುತ್ ರಚಿಸಿ ಕೊಂಡಿದ್ದಾರೆ. ಸಾಮಾನ್ಯ ವರ್ಗದವರಿಂದ ರೂ: 25000.00 ಹಾಗೂ ಪರಿಶ್ಚಿಜಾತಿ, ಪರಿಶಿಷ್ಟ ವರ್ಗದವರಿಂದ ರೂ: 1250.00ಗಳನ್ನು ಪಾವತಿಸಿಕೊಂಡು ಇತರೆ ಮಂಡಳಿಯ ನಿಯಮಗಳನ್ನು ಅವರು ಪಾಲಿಸಿದ ನಂತರ ಸಕ್ರಮಗೊಳಿಸಲಾಗುತ್ತಿದೆ.

2) ಒಂದು ವೇಳೆ ಮಂಡಳಿಯ ಮಾದರಿಯಲ್ಲಿ ವಿದ್ಯುತ್ ಮಾರ್ಗ ರಚಿಸಿ ಕೊಂಡಿಲ್ಲದಿದ್ದರೆ ಸಾಮಾನ್ಯ ವರ್ಗದವರಿಂದ ರೂ: 10,000.00 ಹಾಗೂ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗವರಿಂದ ರೂ: 5000.00 ಅಥವಾ ಎಲ್. ಟಿ ಮಾರ್ಗ ವಿಸ್ತರಣೆಗೆ ತಗಲುವ ಅಂದಾಜು ಪಟ್ಟಿ ಇವೆರಡರಲ್ಲಿ ಯಾವುದು ಹೆಚ್ಚು ಅದನ್ನುಮಂಡಳಿಗೆ ಪಾವತಿಸಿಕೊಂಡು ಇತರೆ ನಿಯಮಗಳನ್ನು ಪಾಲಿಸಿದ ನಂತರ ಸಕ್ರಮಗೊಳಿಸಲಾಗುತ್ತಿದೆ.

ಭದ್ರಾ ಜಲಾಶಯ ನಿರ್ಮಾಣದಲ್ಲಿ ಜಮೀನು ಕಳೆದುಕೊಂಡವರಿಗೆ ಪರಿಹಾರ ನೀಡುವುದು.

662 (61) ಶ್ರೀ ಕೆ. ಎಸ್ ಈಶ್ವರಪ್ಪ(ಶಿವಮೊಗ್ಗ) : ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಭದ್ರಾ ಜಲಾಶಯವನ್ನು ಯಾವಾಗ ನಿರ್ಮಿಸಲಾಯಿತು?

2. ಇದರಲ್ಲಿ ಜಮೀನು ಕಳೆದುಕೊಂಡ ಎಷ್ಟು ಜನರಿಗೆ ಪರಿಹಾರ ನೀಡಬೇಕಾಗಿದೆ?

3. ಪರಿಹಾರಕ್ಕಾಗಿ ಮೀಸಲಿಟ್ಟ ಒಟ್ಟು ಅಂದಾಜು ಮೊತ್ತವೆಷ್ಟು?

4. ಈ ಪರಿಹಾರವನ್ನು ಯಾವಾಗ ನೀಡಲಾಗುವುದು?

ಶ್ರೀ ಕೆ.ಎನ್‌ನಾಗೇಗೌಡ (ಬೃಹತ್ ನೀರಾವರಿ ಸಚಿವರು)

1. 1965ರಲ್ಲಿ ನಿರ್ಮಿಸಲಾಯಿತು.

2. ಒಟ್ಟು 686 ಜನರಿಗೆ ಪರಿಹಾರ ನೀಡಬೇಕಾಗಿದೆ.

3. ಪರಿಹಾರಕ್ಕಾಗಿ ಮೀಸಲಿಟ್ಟ ಒಟ್ಟು ಅಂದಾಜು ಮೊತ್ತ ರೂ. 137.703 ಲಕ್ಷ.

4. ಭೂ ಪರಿಹಾರಕ್ಕೆ ಆದ್ಯತೆ ನೀಡಿ ಹಣ ಬಿಡುಗಡೆ ಮಾಡಲಾಗುವುದು.

ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿ.

663(63) ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಸಣ್ಣ ನೀರಾವರಿ ಮತ್ತುಅಂತರ್ಜಲ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ಕೈ ಗೊಂಡ ಕಾರ್ಯಕ್ರಮಗಳಾವುವು;

ಆ) ರಾಜ್ಯದಲ್ಲಿ ಅಂತರ್ಜಲ ಮಟ್ಟವು ಕುಸಿಯುತ್ತಿದೆಯೆಂದು ಗುರುತಿಸಿಲಾದ ತಾಲ್ಲೂಕುಗಳಾವುವು;